ಕರ್ನಾಟಕ ಉಚ್ಚ ನ್ಯಾಯಾಲಯ

(ಧಾರವಾಡ ಪೀಠ)

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಮೊಹಮ್ಮದ್ ನವಾಜ್,

ಶ್ರೀ ಅಶೋಕ್ ಹಣಮಂತಪ್ಪ ಬದಾಮಿ ವಿರುದ್ಧ ಕರ್ನಾಟಕ ರಾಜ್ಯದ ಪ್ರತಿನಿಧಿಯಾಗಿ ಉಪ ಪೊಲೀಸ್ ವರಿಷ್ಠಾಧಿಕಾರಿ, ಎಸಿಬಿ, ಗದಗ ಮತ್ತು ಇನ್ನೊಬ್ಬರು

ಕ್ರಿಮಿನಲ್ ಅರ್ಜಿಸಂಖ್ಯೆ: 100859/2018 ಇದರೊಂದಿಗೆ ಇತರೆ, ದಿನಾಂಕ 24 ನೇ ಮಾರ್ಚ್, 2021

ಆದೇಶ

ನ್ಯಾಯಮೂರ್ತಿ ಶ್ರೀ ಮೊಹಮ್ಮದ್ ನವಾಜ್ .:

ಈ ಅರ್ಜಿಗಳಲ್ಲಿ, ಆರೋಪಿತ ಅಪರಾಧದ ಸಂಜ್ಞೆಯತೆಯನ್ನು ತೆಗೆದುಕೊಂಡು ಮತ್ತು ಖಾಸಗಿ ದೂರು ಎಂದು ಪ್ರಕರಣವನ್ನು ದಾಖಲಿಸಿ ಹಾಗೂ ತರುವಾಯ, ವಿಷಯವನ್ನು ತನಿಖೆಗೆ ಉಲ್ಲೇಖಿಸಿ, ಗದಗ್ನ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಪಿ.ಸಿ.ಸಂಖ್ಯೆ: 1/2017 ರಲ್ಲಿ ಹೊರಡಿಸಿದದಿನಾಂಕ: 29.06.2017 ರ ಆದೇಶವನ್ನು ಅರ್ಜಿದಾರರು ಪ್ರಶ್ನಿಸಿದ್ದಾರೆ ಮತ್ತು ಅಧಿವಿಚಾರಣಾ ನ್ಯಾಯಾಲಯದ ಮುಂದೆ ಬಾಕಿ ಇರುವ ಎಲ್ಲಾ ವ್ಯವಹರಣೆಗಳನ್ನು ರದ್ದುಗೊಳಿಸಲು ಕೋರಿದ್ದಾರೆ.

2. ಅರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳ ವಾದವೆಂದರೆ, ದೂರನ್ನು ಸ್ವೀಕರಿಸುವ ಕುರಿತು ಮಾನ್ಯ ಸತ್ರ ನ್ಯಾಯಾಧೀಶರು ಅನುಸರಿಸಿದ ಕಾರವಿಧಾನವು ಕಾನೂನಿಗೆ ಅನುಸಾರವಾಗಿರುವುದಿಲ್ಲ ಮತ್ತು ಇದು ಸರ್ವೋಚ್ಚ ನ್ಯಾಯಾಲಯದ ಜ ಹಾಗೂ ಈ ನ್ಯಾಯಾಲಯದ ವಿವಿಧ ತೀರ್ಪುಗಳಿಗೆ ವಿರುದ್ಧವಾಗಿದೆ.ಇದಲ್ಲದೆ, ದೂರಿನಲ್ಲಿನ ಎಲ್ಲಾ ಆರೋಪಗಳು ಆಧಾರರಹಿತವಾಗಿವೆ ಮತ್ತು ಅರ್ಜಿದಾರರು ಆರೋಪಿಸಲಾದ ವ್ಯವಹಾರದಲ್ಲಿ ತೊಡಗಿಲ್ಲದೇ ಇದ್ದಾಗ್ಯೂ ಅವರನ್ನು ತಪ್ಪಾಗಿ ಬಿಂಬಿಸಲಾಗಿದೆ ಎಂದು ಅವರು ವಾದಿಸಿದ್ದಾರೆ.ಯಾವುದೇ ಕಾರಣಗಳನ್ನು ನೀಡದೆ ಸಂಜ್ಞೆಯತೆಯನ್ನು ತೆಗೆದುಕೊಳ್ಳಲಾಗಿದ್ದು, ಇದು ಸ್ಪಷ್ಟವಾಗಿ ಮಾನ್ಯ ಸತ್ರ ನ್ಯಾಯಾಧೀಶರು ವಿವೇಚನೆಯನ್ನು ಬಳಸದೆ ಹಾಗೆ ಮಾಡಿದ್ದಾರೆಂಬುದನ್ನು ಸೂಚಿಸುತ್ತದೆ ಎಂದು ಅವರು ನಿವೇದಿಸಿಕೊಂಡಿದ್ದಾರೆ.

3. ಇದಲ್ಲದೆ ಅವರು ವಾದಿಸಿರುವುದೇನೆಂದರೆ, ಕ್ರಿಮಿನಲ್ ಅರ್ಜಿಸಂಖ್ಯೆ: 101492/2017 ರಲ್ಲಿ ಅರ್ಜಿದಾರನು, ಕರ್ನಾಟಕ ಗೃಹ ಮಂಡಳಿಯ ನ್ಯಾಯವಾದಿಗಳ ಪಟ್ಟಿಯಲ್ಲಿ ಒಬ್ಬ ನ್ಯಾಯವಾದಿಯಾಗಿದ್ದು, ಭ್ರಷ್ಟಾಚಾರ ತಡೆ ಅಧಿನಿಯಮ, 1988 ರ 2 (ಸಿ) ಪ್ರಕರಣದ ಅಭಿಪ್ರಾಯದಲ್ಲಿ, ಆತನು ಒಬ್ಬ ಸರ್ಕಾರಿ ನೌಕರನಾಗಿದ್ದಾನಾದ್ದರಿಂದ, ಆತನ ವಿರುದ್ಧ ವ್ಯವಹರಣೆ ನಡೆಸಲು ಅನುಮತಿಯ ಅಗತ್ಯವಿದೆ.ತದನುಸಾರವಾಗಿ ಅರ್ಜಿಗಳನ್ನು ಪುರಸ್ಕರಿಸಲು ಕೋರಿದ್ದಾರೆ.

4. ಎದುರುದಾರಸಂಖ್ಯೆ: 1/ಭ್ರಷ್ಟಾಚಾರ ನಿಗ್ರಹ ದಳದ ಪರ ಹಾಜರಾದ ಮಾನ್ಯ ನ್ಯಾಯವಾದಿಗಳು, ವಿಷಯವು ಇನ್ನೂ ತನಿಖಾ ಹಂತದಲ್ಲಿದ್ದು, ತನಿಖೆ ನಡೆಸಿ, ವರದಿ ದಾಖಲಿಸುವ ಪೊಲೀಸರ ಶಾಸನಾತ್ಮಕ ಕರ್ತವ್ಯವನ್ನು ಅದರ ಪ್ರಾರಂಭದಲ್ಲೇ ತಡೆಯಲಾಗುವುದಿಲ್ಲವೆಂದು; ತನಿಖೆಗಾಗಿ ವಿಷಯವನ್ನು ಉಲ್ಲೇಖಿಸುವಲ್ಲಿ ಮಾನ್ಯ ಸತ್ರ ನ್ಯಾಯಾಧೀಶರು ಯಾವುದೇ ಕಾನೂನುಬಾಹಿರತೆಯನ್ನು ಎಸಗಿರುವುದಿಲ್ಲವೆಂದು ವಾದಿಸಿದ್ದಾರೆ.ತದನುಸಾರವಾಗಿ, ಅವರು ಅರ್ಜಿಗಳನ್ನು ತಿರಸ್ಕರಿಸಲು ಕೋರಿದ್ದಾರೆ.

5. ಇದರಲ್ಲಿನ 2 ನೇ ಎದುರುದಾರನು, ದಂಡ ಪ್ರಕ್ರಿಯಾ ಸಂಹಿತೆಯ 200 ನೇ ಪ್ರಕರಣದ ಅಡಿಯಲ್ಲಿ, ಕ್ರಮವಾಗಿ 7 ನೇ ಮತ್ತು 10 ನೇ ಆರೋಪಿಗಳೆಂದು ದೋಷಾರೋಪಣೆ ಮಾಡಲಾಗಿರುವ ಅರ್ಜಿದಾರರ ವಿರುದ್ಧ, ಭಾರತ ದಂಡ ಸಂಹಿತೆಯ 149 ನೇ ಪ್ರಕರಣದೊಂದಿಗೆ ಓದಲಾದ 417, 418, 419, 420 9, 465 9, 467, 468, 471, 120 ಬಿ ಪ್ರಕರಣಗಳ ಅಡಿಯಲ್ಲಿ ಹಾಗೂ ಭ್ರಷ್ಟಾಚಾರ ತಡೆ ಅಧಿನಿಯಮ, 1988 ರ 13 (ಡಿ) ( i) ರ ಅಡಿಯಲ್ಲಿ ದಂಡನೀಯ ಅಪರಾಧವನ್ನು ಆರೋಪಿಸಿ ಖಾಸಗಿ ದೂರನ್ನು ಸಲ್ಲಿಸಿದ್ದಾರೆ.

6. ಮಾನ್ಯ ಸತ್ರ ನ್ಯಾಯಾಧೀಶರು ಹೊರಡಿಸಿದದಿನಾಂಕ: 29.06.2017 ರ ಆದೇಶವನ್ನು ಈ ಕೆಳಗಿನಂತೆ ಓದಲಾಗಿದೆ:

> " ದೂರುದಾರ ಮತ್ತು ನ್ಯಾಯವಾದಿ ಹಾಜರಾಗಿಲ್ಲ.
>
> ದೂರನ್ನು ಮತ್ತು ಇತರ ಸಾಕ್ಷ್ಯಾಧಾರಗಳನ್ನು ಅವಲೋಕಿಸಲಾಯಿತು.
>
> ಆರೋಪಿತ ಅಪರಾಧಗಳ ಸಂಯತೆಯನ್ನು ತೆಗೆದುಕೊಳ್ಳಲಾಗಿದೆ.
>
> ಖಾಸಗಿ ದೂರನ್ನಾಗಿ ದಾಖಲಿಸಲಾಗಿದೆ.
>
> ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 156 ( 3) ನೇ ಪ್ರಕರಣದ ಪ್ರಕಾರ, ವಿಷಯವನ್ನು ತನಿಖೆ ಮಾಡಲು ಡೆಪ್ಯುಟಿ ಪೊಲೀಸ್ ಸೂಪರಿಂಟೆಂಡೆಂಟ್, ಭ್ರಷ್ಟಾಚಾರ ನಿಗ್ರಹ ದಳ, ಗದಗ ಇವರಿಗೆ ಉಲ್ಲೇಖಿಸಲಾಗಿದೆ.
>
> ದಿನಾಂಕ:30.08.2016 ರ ಒಳಗೆ ವರದಿಯನ್ನು ನಿರೀಕ್ಷಿಸಲಾಗಿದೆ. "

7. ಪ್ರಿಯಾಂಕ ಶ್ರೀವಾಸ್ತವ ಮತ್ತು ಇನ್ನೊಬ್ಬರು ವಿರುದ್ಧ-ಉತ್ತರ ಪ್ರದೇಶ ರಾಜ್ಯ ಮತ್ತು ಇತರರು ' ಮೊಕದ್ದಮೆಯಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು, ದಂಡ ಪ್ರಕ್ರಿಯಾ ಸಂಹಿತೆಯ 200 ನೇ ಪ್ರಕರಣದ ಅಡಿಯಲ್ಲಿ ದೂರನ್ನು ಸಲ್ಲಿಸಿದಾಗ ಅಧಿವಿಚಾರಣಾ ನ್ಯಾಯಾಲಯವು ಅನುಸರಿಸಬೇಕಾಗಿರುವ ಕೆಲವು ಮಾರ್ಗಸೂಚಿಗಳನ್ನು ವಿಧಿಸಿದೆ.ಅದರಲ್ಲಿ, ತನಿಖೆಗೆ ನಿರ್ದೇಶನ ನೀಡಲು ಕೋರಿ 156 ( 3) ನೇ ಪ್ರಕರಣದ ಅಡಿಯಲ್ಲಿ ಅರ್ಜಿಯನ್ನು ಸಲ್ಲಿಸಿದಾಗ, ದಂಡಾಧಿಕಾರಿಗಳು ತಮ್ಮ ವಿವೇಚನಾಧಿಕಾರವನ್ನು ಚಲಾಯಿಸಬೇಕಾಗುತ್ತದೆ ಮತ್ತು ನ್ಯಾಯದ ಹಿತದೃಷ್ಟಿಯಿಂದ, ದಂಡಾಧಿಕಾರಿಗಳು ತನಿಖೆಗೆ ನಿರ್ದೇಶಿಸಲು ತಮ್ಮ ವಿವೇಚನಾಧಿಕಾರವನ್ನು ಬಳಸಬೇಕಾಗುತ್ತದೆ ಎಂದೂ ಸಹ ಅದರಲ್ಲಿ ಅಭಿಪ್ರಾಯಪಡಲಾಗಿದೆ.ದಂಡ ಪ್ರಕ್ರಿಯಾ ಸಂಹಿತೆಯ 156 ( 3) ನೇ ಪ್ರಕರಣದ ಅಡಿಯಲ್ಲಿ ಅಧಿಕಾರವನ್ನು ಚಲಾಯಿಸುವಾಗ, ಅಧಿವಿಚಾರಣಾ ನ್ಯಾಯಾಲಯದ ಕರ್ತವ್ಯ ಮತ್ತು ಉದ್ದೇಶ ಏನಾಗಿರಬೇಕೆಂಬುದನ್ನು ಸದರಿ ನಿರ್ಣಯದಲ್ಲಿ ಸ್ಪಷ್ಟೀಕರಿಸಲಾಗಿದೆ.

8. ಪ್ರಸ್ತುತ ಮೊಕದ್ದಮೆಯಲ್ಲಿ, ಆರೋಪಿತ ಅಪರಾಧದ ಸಂಜ್ಞೆಯತೆಯನ್ನು ತೆಗೆದುಕೊಂಡ ನಂತರ, ದಂಡ ಪ್ರಕ್ರಿಯಾ ಸಂಹಿತೆಯ 156 ( 3) ನೇ ಪ್ರಕರಣದ ಅಡಿಯಲ್ಲಿ ತನಿಖೆಗಾಗಿ ವಿಷಯವನ್ನು ಪೊಲೀಸರಿಗೆ ಉಲ್ಲೇಖಿಸಲಾಗಿತ್ತು ಎಂಬುದನ್ನು ಸಹ ಗಮನಿಸಬೇಕಾಗಿದೆ.

9. ಪ್ರಿಯಾಂಕ ಶ್ರೀವಾಸ್ತವ ಮೊಕದ್ದಮೆಯ (ಮೇಲೆ ಹೇಳಿದ) ತೀರ್ಪಿನ 24 ನೇ ಕಂಡಿಕೆಯ ಉದ್ಧತ ಭಾಗವನ್ನು ಇಲ್ಲಿ ಕೆಳಗಿನಂತೆ ನೀಡಲಾಗಿದೆ:

"24. ಸಿಆರ್ಇಎಫ್ ಫೈನಾನ್ಸ್ ಲಿಮಿಟೆಡ್ -ವಿರುದ್ಧ ಶ್ರೀ ಶಾಂತಿ ಹೋಮ್ಸ್ (ಪಿ) ಲಿಮಿಟೆಡ್ (2005) 7 ಎಸ್ಸಿಸಿ 467 ಮೊಕದ್ದಮೆಯಲ್ಲಿ, ಅಪರಾಧಗಳ ಸಂಯತೆ ತೆಗೆದುಕೊಳ್ಳುವ ದಂಡಾಧಿಕಾರಿಗಳ ಅಧಿಕಾರ ಕುರಿತು ವ್ಯವಹರಿಸುವಾಗ, ದೂರನ್ನು ಪರಿಗಣಿಸಿದ ನ ಂ ತರ, ದಂಡಾಧಿಕಾರಿಗಳು ದಂಡ ಪ್ರಕ್ರಿಯಾ ಸಂಹಿತೆಯ 156 ( 3) ನೇ ಪ್ರಕರಣದ ಅಡಿಯಲ್ಲಿ ದೂರನ್ನು ತನಿಖೆಗಾಗಿ ಪೊಲೀಸರಿಗೆ ಕಳುಹಿಸುವುದು ಸೂಕ್ತವೆಂದು ಪರಿಗಣಿಸಬಹುದು ಎಂದು ಅಭಿಪ್ರಾಯಪಡಲಾಗಿದೆ ಮತ್ತು ಪುನಃ (ಮಾರೌ -ವಿರುದ್ಧ ಮಹಾರಾಷ್ಟ್ರ ರಾಜ್ಯ (2013) 5 ಎಸ್ಸಿಸಿ 615, ಮೊಕದ್ದಮೆಯ ಕಂಡಿಕೆ -18 ರಲ್ಲಿ ಈ ಮುಂದಿನಂತೆ ಅಭಿಪ್ರಾಯಪಡಲಾಗಿದೆ:

18. " ದಂಡಾಧಿಕಾರಿಗಳು ದೂರನ್ನು ಸ್ವೀಕರಿಸಿದಾಗ, ದೂರಿನಲ್ಲಿ ಆರೋಪಿಸಲಾದ ಸಂಗತಿಗಳು ಅಪರಾಧ ಎಸಗಿರುವುದನ್ನು ಬಹಿರಂಗಪಡಿಸಿದರೆ, ಅವರು ಸಂಜೇಯತೆ ತೆಗೆದುಕೊಳ್ಳಬೇಕಿಲ್ಲ.ಈ ವಿಷಯದಲ್ಲಿ, ದ ಂ ಡಾಧಿ ಕಾರಿಗಳು ವಿವೇಚನಾಧಿ ಕಾರವನ್ನು ಹೊಂದಿರುತ್ತಾರೆ.ದೂರನ್ನು ಓದಿದ ನಂತರ, ಅದರಲ್ಲಿನ ಆರೋಪಗಳು ಸಂಸ್ಥೆಯ ಅಪರಾಧಗಳೆಂದು ಹಾಗೂ 156 ( 3) ನೇ ಪ್ರಕರಣದ ಅಡಿಯಲ್ಲಿ ತನಿಖೆಗಾಗಿ ಪೊಲೀಸರಿಗೆ ದೂರನ್ನು ಕಳುಹಿಸುವುದು ನ್ಯಾಯಕ್ಕೆ ಸಹಾಯಕವೆಂದು ಮತ್ತು ತನಿಖೆ ಮಾಡುವುದು ಪೊಲೀಸರ ಪ್ರಾಥಮಿಕ ಕರ್ತವ್ಯವಾಗಿರುವ ವಿಷಯವನ್ನು ತನಿಖೆ ಮಾಡುವಲ್ಲಿ ದಂಡಾಧಿಕಾರಿಗಳ ಮೌಲ್ಯಯುತ ಸಮಯ ವ್ಯರ್ಥವಾಗದೆ ಉಳಿಯುವುದೆಂದು ಅವರಿಗೆ ಕಂಡುಬಂದರೆ, ಆ ನ್ಯಾಯಾಲಯವನ್ನು, ಅಪರಾಧದ ಸಂಜ್ಞೇಯತೆಯನ್ನು ತೆಗೆದುಕೊಳ್ಳಲು ಪರಾಯವೆಂದು ಅವರಿಗೆ ಸಮರ್ಥಿಸಲಾಗುವುದು.ಈ ಮೊದಲೇ ಹೇಳಿದಂತೆ, ಸಂಜೇಯ ಅಪರಾಧ ಎಸಗಿದ್ದಕ್ಕೆ ಸಂಬಂಧಿಸಿದ ದೂರಿನ ಸಂದರ್ಭದಲ್ಲಿ, ದಂಡ ಪ್ರಕ್ರಿಯಾ ಸಂಹಿತೆಯ 190 ( 1) (  ಎ) ಪ್ರಕರಣದ ಅಡಿಯಲ್ಲಿ ದಂಡಾಧಿಕಾರಿಗಳು ಅಪರಾಧದ ಸಂಜ್ಞೇಯತೆಯನ್ನು ತೆಗೆದುಕೊಳ್ಳುವ ಮೊದಲು, ದಂಡ ಪ್ರಕ್ರಿಯಾ ಸಂಹಿತೆಯ 156 ( 3) ನೇ ಪ್ರಕರಣದ ಅಡಿಯಲ್ಲಿ ಅಧಿಕಾರವನ್ನು ಅನ್ವಯಿಸಬಹುದಾಗಿದೆ.ಆದಾಗ್ಯೂ, ಒಮ್ಮೆ ಅವರು ಅಂಥ ಸಂಜ್ಞೇಯತೆಯನ್ನು ತೆಗೆದುಕೊಂಡರೆ ಮತ್ತು XV ನೇ ಅಧ್ಯಾಯದಲ್ಲಿ ನಿರೂಪಿಸಿದ ಪ್ರಕ್ರಿಯೆಯನ್ನಾಧರಿಸಿ ಪ್ರವೃತ್ತರಾದರೆ, ಸಂಜ್ಞೇಯತೆ-ಪೂರ್ವ ಹಂತದಲ್ಲಿ ಹಿಂತೆಗೆದುಕೊಳ್ಳಲು ಮತ್ತು 156 ( 3) ನೇ ಪ್ರಕರಣದ ನೆರವು ಪಡೆಯಲು ಅವರು ಸಕ್ಷಮರಾಗಿರುವುದಿಲ್ಲ. "

10. ಆದುದರಿಂದ, ಮಾನ್ಯ ಸತ್ರ ನ್ಯಾಯಾಧೀಶರು ಹೊರಡಿಸಿದದಿನಾಂಕ: 29.06.2017 ರ ಪ್ರಶ್ನಿತ ಆದೇಶವು, ದಂಡ ಪ್ರಕ್ರಿಯಾ ಸಂಹಿತೆಯ ಅಡಿಯಲ್ಲಿ ಪದ್ಯಾಲೋಚಿಸಿದ ಪ್ರಕ್ರಿಯೆಗೆ ಮತ್ತು ಮೇಲೆ ಹೇಳಿದ ನಿರ್ಣಯದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ವಿಧಿಸಿದ ನಿಯಮಕ್ಕೆ ವಿರುದ್ಧವಾದುದಾಗಿದೆ.ಮಾನ್ಯ ಸತ್ರ ನ್ಯಾಯಾಧೀಶರು ಸಂಜೇಯತೆಯನ್ನು ತೆಗೆದುಕೊಂಡ ನಂತರ, ದಂಡ ಪ್ರಕ್ರಿಯಾ ಸಂಹಿತೆಯ 156 ( 3) ನೇ ಪ್ರಕರಣದ ಮೇರೆಗೆ ತನಿಖೆಗಾಗಿ ವಿಷಯವನ್ನು ಉಲ್ಲೇಖಿಸಿದ್ದಾರೆ.ಆದುದರಿಂದ, ಪ್ರಶ್ನಿತ ಆದೇಶವು ಕಾನೂನಿಲ್ಲಿ ಸಮರ್ಥನೀಯವಲ್ಲ ಹಾಗೂ ಅದು ತಳ್ಳಿಹಾಕಲು ಯೋಗ್ಯವಾಗಿದೆ.ಆದ್ದರಿಂದ ಈ ಮುಂದಿನ ಆದೇಶ:

ಆಜ್ಞೆ

ಎ) ಅರ್ಜಿಗಳನ್ನು ಪುರಸ್ಕರಿಸಲಾಗಿದೆ.

ಬಿ) ಪಿ.ಸಿ.ಸಂಖ್ಯೆ: 1/2017 ರಲ್ಲಿ ಗದಗ್ನ ಮಾನ್ಯ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹೊರಡಿಸಿದದಿನಾಂಕ: 29.06.2017 ರ ಆದೇಶವನ್ನು ಈ ಮೂಲಕ ತಳ್ಳಿಹಾಕಲಾಗಿದೆ.

ಸಿ) ದೂರನ್ನು ಅಧಿವಿಚಾರಣಾ ನ್ಯಾಯಾಲಯದ ಕಡತದಲ್ಲಿ ಸ್ವೀಕರಿಸಿದ ಹಂತದಿಂದ ಕಾನೂನಿಗನುಸಾರವಾಗಿ ಕ್ರಮ ತೆಗೆದುಕೊಳ್ಳುವ ನಿರ್ದೇಶನದೊಂದಿಗೆ ವಿಷಯವನ್ನು ಅದಕ್ಕೆ ಹಿಂತಿರುಗಿಸಲಾಗಿದೆ.

ಡಿ) ಪಕ್ಷಕಾರರ ಇತರ ಎಲ್ಲಾ ವಾದಗಳು ಚರ್ಚೆಗೆ ಮುಕ್ತವಾಗಿರುತ್ತವೆ.